15	Belgaum	763.58	685.40
16	Bijapur	437.51	483.62
17	Bagalkote	583.08	236.55
18	Dharwad	152.15	185.10
19	Gadag	688.76	308.33
20	Haveri	341.57	527.34
21	Uttara Kannada	352.37	269.06
22	Gulbarga	940.73	343.27
23	Bidar	244.15	172.23
24	Raichur	-	253.97
25	Koppal	227.36	357.31
26	Bellary	164.98	119.41
	Grand Total	**10,637.67**	**9,707.29**

ಬೈಲಹೊಂಗಲ ಕ್ಷೇತ್ರದ ಪಶು ಚಿಕಿತ್ಸಾ ಕೇಂದ್ರಗಳು

1270 (1695) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1999-2000ನೇ ಸಾಲಿನಲ್ಲಿ ಮಂಜೂರಾದ ಪಶು ಚಿಕಿತ್ಸಾಲಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಮೇಲ್ದರ್ಜೆಗೆ ಏರಿಸಲು ನಿರ್ಧರಿಸಲಾದ ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು?

ಇ) ಬೈಲಹೊಂಗಲ ತಾಲ್ಲೂಕು ಪಣ್ಣೂರು ಹಾಗೂ ಸವದತ್ತಿ ತಾಲ್ಲೂಕು ಹಿರೇಬೂದನೂರ ಗ್ರಾಮಗಳಲ್ಲಿ ಹೊಸ ಪಶುಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೆ;

ಈ) ಬೈಲಹೊಂಗಲ ತಾಲ್ಲೂಕು ದೊಡವಾಡೆ ಹಾಗೂ ಸವದತ್ತಿ ತಾಲ್ಲೂಕು ಚಚಡಿ ಗ್ರಾಮದ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನಾ, ಪಶುವೈದ್ಯ ಹಾಗೂ ಸಕ್ಕರೆ ಸಚಿವರು) :

ಅ) ಯಾವುದೂ ಇಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಯುವ ಜನ ಸೇವಾ ಇಲಾಖೆಯ ಅನುದಾನ ಹಾಗೂ ಖರ್ಚು

1273 (1698) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998-99ರ ಹಾಗೂ 99-2000ನೇ ಸಾಲಿನಲ್ಲಿ ಯುವಜನ ಸೇವಾ ಇಲಾಖೆಗೆ ಆಯವ್ಯಯದಲ್ಲಿ ಒದಗಿಸಲಾದ ಹಣ ಎಷ್ಟು; ಹಾಗೂ ಬಿಡುಗಡೆ ಮಾಡಲಾದ ಹಣ ಎಷ್ಟು ಹಾಗೂ ಖರ್ಚು ಮಾಡಲಾದ ಹಣ ಎಷ್ಟು (ಯಾವ ಯಾವ ಉದ್ದೇಶಕ್ಕಾಗಿ ಹಣ ಒದಗಿಸಲಾಗಿದ್ದಿತು ಪೂರ್ಣ ವಿವರ ನೀಡುವುದು)

ಆ) 1998-99, 99-2000ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಒದಗಿಸಲಾದ ಹಣ ಎಷ್ಟು, ಹಾಗೂ ಖರ್ಚು ಮಾಡಲಾದ ಹಣ ಎಷ್ಟು; (ತಾಲ್ಲೂಕುವಾರು ವಿವರ ನೀಡಿರಿ)

ಇ) ಸರ್ಕಾರ ಯುವಕ ಮಂಡಳಿಗಳಿಗೆ ಒದಗಿಲಸಾದ ಸಹಾಯ ಯಾವುದು: ಬೆಳಗಾವಿ ಜಿಲ್ಲೆಯಲ್ಲಿ ಇರುವ ಯುವಕ ಮಂಡಳಗಳ ಸಂಖ್ಯೆ ಎಷ್ಟು; ತಾಲ್ಲೂಕುವಾರು ಮಾಹಿತಿ ಕೊಡುವುದು ಹಾಗೂ ಎಷ್ಟು ಯುವಕ ಮಂಡಳಿಗಳು ಕೆಲಸ ಮಾಡುತ್ತಿದೆ)

ಈ) ಅವುಗಳ ಪೈಕಿ ಎಷ್ಟು ಯುವಕ ಮಂಡಳಗಳಿಗೆ ಸರ್ಕಾರ ಸಹಾಯ ಒದಗಿಸಿದೆ;

ಉ) ಸರ್ಕಾರದಿಂದ ಹೆಚ್ಚಿನ ಸಹಾಯ ಇಲ್ಲದೆ ಇರುವುದರಿಂದ ಈ ಯುವಕ ಮಂಡಳಗಳು ಸರಿಯಾಗಿ ಕೆಲಸ ಮಾಡದೇ ಇರುವ ಸಂಗತಿ ನಿಜವೇ?

ಊ) ಹಾಗಿದ್ದಲ್ಲಿ, ಈ ಯುವಕ ಮಂಡಳಗಳು ಉತ್ತಮ ರೀತಿಯಿಂದ ನಡೆಯಲು ಯಾವ ಹೊಸ ಕಾರ್ಯಕ್ರಮ ಸರ್ಕಾರ ಹಾಕಿ ಕೊಂಡಿದೆ;